ಸಾರಿಗೆ ಇಲಾಖೆಯ ಚೆಕ್ ಪೋಸ್ಟ್‌ಗಳ ಸುಧಾರಣೆ

88 (749) ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಚೆಕ್‌ಪೋಸ್ಟ್‌ಗಳ ಸಂಖ್ಯೆ ಎಷ್ಟು ? ವಿವರ ಒದಗಿಸುವುದು ?

ಆ) ಯಾವ ಯಾವ ಚೆಕ್‌ಪೋಸ್ಟ್‌ಗಳಲ್ಲಿ ಎಷ್ಟೆಷ್ಟು ಹಿರಿಯ ಮೋಟಾರು ವಾಹನ ನಿರೀಕ್ಷಕರು ಹಾಗೂ ಮೋಟಾರು ವಾಹನ ನಿರೀಕ್ಷಕರು ಸೇವೆ ಸಲ್ಲಿಸುತ್ತಿರುವರು ; ವಿವರ ಒದಗಿಸುವುದು ?

ಇ) ಚೆಕ್‌ಪೋಸ್ಟ್‌ಗಳ ಸುಧಾರಣೆಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 11 ಚೆಕ್‌ಪೋಸ್ಟ್‌ಗಳಿದ್ದು ಅವುಗಳು ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

1. ಅತ್ತಿಬೆಲೆ 2. ಬಾಗೇಪಲ್ಲಿ 3. ನಂಗ್ಲಿ 4. ಗೌರಿಬಿದನೂರು 5. ಗುಂಡ್ಲುಪೇಟೆ 6. ತಲಪಾಡಿ 7. ರಾಮನಗರ 8. ಜಲ್ಕಿ 9. ಹುಮ್ನಾಬಾದ್ 10. ಆಳಂದ 11. ಕೊಗ್ನಳಿ

ಆ) ಪ್ರತಿ ತಿಂಗಳಿಗೊಮ್ಮೆ ಈ ಕೆಳಕಂಡಂತೆ ಸರದಿಯ ಮೇಲೆ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಛೇರಿಯಿಂದ ಇವರನ್ನು ನಿಯೋಜಿಸಲಾಗುತ್ತಿದೆ.

ಕ್ರಮ ಸಂಖ್ಯೆ	ಚೆಕ್ ಪೋಸ್ಟ್ ಹೆಸರು	ಹಿರಿಯ ಮೋ.ವಾ. ನೀರಿಕ್ಷಕರು	ಮೋ.ವಾ. ನೀರಿಕ್ಷಕರು	ಒಟ್ಟು
1.	ಅತ್ತಿಬೆಲೆ	14	22	36
2.	ನಂಗ್ಲಿ	03	03	06
3.	ಬಾಗೇಪಲ್ಲಿ	03	03	06
4.	ಗುಂಡ್ಲುಪೇಟೆ	04	12	16
5.	ತಲಪಾಡಿ	08	16	24
6.	ಹುಮ್ನಾಬಾದ್	04	03	07
7.	ಆಳಂದ	02	01	03
8.	ಕೊಗ್ನೊಳಿ	08	04	12
9.	ರಾಮನಗರ (ಉ.ಕ)	03	01	04
10.	ಜಲ್ಕಿ	08	04	12
11.	ಗೌರಿಬಿದನೂರು	01	02	03
	ಒಟ್ಟು	58	71	129

8 ಗಂಟೆಗೆ ಒಂದು ಪಾಳಿಯಂತೆ ದಿನಕ್ಕೆ 3 ಪಾಳಿಗಳನ್ನಾಗಿ ಇವರನ್ನು ವಿಂಗಡಿಸಿ ಸದರಿಯ ಮೇಲೆ ತನಿಖಾ ಠಾಣೆಗೆ ನಿಯೋಜಿಸಲಾಗುತ್ತದೆ.

ಇ) ಸಾರಿಗೆ ವಾಣಿಜ್ಯ ತೆರಿಗೆ ಹಾಗೂ ಅಬ್ಕಾರಿ ಇಲಾಖೆಗಳನ್ನು ಒಳಗೊಂಡಂತೆ ಸಂಯುಕ್ತ ಗಣಕೀಕೃತ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲು, ಸರ್ಕಾರ ಆದೇಶ ಸಂಖ್ಯೆ : ಎಫ್‌ಡಿ 57 ಸಿಎಸ್‌ಎಂ 2001, ದಿನಾಂಕ : 18-9-2001ರಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ.

ಶ್ರೀ ಎನ್. ಸಂಪಂಗಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಸಚಿವರು ಏನು ಉತ್ತರ ಕೊಟ್ಟಿದ್ದಾರೆ ಅದು ಸರಿಯಾಗಿದೆ. ಮೂರು ವರ್ಷಗಳಲ್ಲಿ ಏನು ರಾಜಸ್ವ ನಿಗದಿ ಮಾಡಿದ್ದಾರೆ ಚೆಕ್‌ಪೋಸ್ಟ್‌ಗಳಲ್ಲಿ ಅದಕ್ಕಿಂತ ಬಹಳ ಕಡಿಮೆ ವಸೂಲು ಆಗುತ್ತಿರುವುದಕ್ಕೆ ಕಾರಣವೇನು ? ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಕೂಡ ಹಿರಿಯ ಮೋಟಾರು ವಾಹನ ನಿರೀಕ್ಷಕರಿದ್ದಾರೆ, ಮೋಟಾರ್ ವಾಹನ ನಿರೀಕ್ಷಕರು ಕೂಡ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಯಾವ ಕಛೇರಿಗಳಲ್ಲಿ ಕೂಡ ಆ ತರಹ ಇಲ್ಲ, ಇದಕ್ಕೆ ಕಾರಣ ಏನು ಎನ್ನುವುದನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ರಮಾನಾಥ ರೈ :- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಯಾವ್ಯಾವ ಚೆಕ್‌ಪೋಸ್ಟ್‌ಗಳಲ್ಲಿ ಎಷ್ಟೆಷ್ಟು ಹಿರಿಯ ಮತ್ತು ಕಿರಿಯ ನಿರೀಕ್ಷಕರು ಕೆಲಸ ಮಾಡುತ್ತಿದ್ದಾರೆಂದು ಕೇಳಿದ ಪ್ರಶ್ನೆಗೆ ನಾನು ಉತ್ತರವನ್ನು ಒದಗಿಸಿದ್ದೇನೆ. ತನಿಖಾ ಚೆಕ್ ಪೋಸ್ಟ್ ಇದ್ದರೂ ಕೂಡ ಎಷ್ಟು ವಸೂಲಾತಿ ಆಗಬೇಕು ಅಷ್ಟು ವಸೂಲಾತಿ ಆಗುತ್ತಿಲ್ಲ ಎನ್ನುವ ಪ್ರಶ್ನೆಯನ್ನು ಕೂಡ ಎತ್ತಿದ್ದಾರೆ. ಹಿರಿಯ ಮತ್ತು ಕಿರಿಯ ನಿರೀಕ್ಷಕರು ಕಳೆದ ಕೆಲವಾರು ವರ್ಷಗಳಿಂದ ಚೆಕ್‌ಪೋಸ್ಟ್‌ಗಳಲ್ಲಿ ಯಾವ ರೀತಿಯಾಗಿ ಕೆಲಸವನ್ನು ಮಾಡಿಕೊಂಡು ಬರಬೇಕಾಗಿತ್ತು ಆ ರೀತಿಯಲ್ಲಿ ಕೆಲಸಮಾಡಿಕೊಂಡು ಬರುತ್ತಿದ್ದಾರೆ. ಚೆಕ್‌ಪೋಸ್ಟ್‌ಗಳಲ್ಲಿ ನಮಗೆ ಈ ಸಾರಿ 22 ಕೋಟಿ ರೂಪಾಯಿಗಳ ಆದಾಯ ಬಂದಿರುತ್ತದೆ. 11 ಚೆಕ್‌ಪೋಸ್ಟ್‌ಗಳಲ್ಲಿ ಈ ಆದಾಯ ಬಂದಿರುವುದು. ಹಲವಾರು ವರ್ಷಗಳಿಂದ ಹಿರಿಯ ತನಿಖಾ ನಿರೀಕ್ಷಕರು ಇಬ್ಬರ ಇದ್ದರೆ ಒಬ್ಬರು ಕಿರಿಯ ನಿರೀಕ್ಷಕರನ್ನು ಚೆಕ್‌ಪೋಸ್ಟ್‌ಗಳಲ್ಲಿ ನೇಮಕ ಮಾಡಿಕೊಂಡು ಬಂದಿರುತ್ತೇವೆ.

ಶ್ರೀ ಎನ್. ಸಂಪಂಗಿ :- ಮಾನ್ಯ ಅಧ್ಯಕ್ಷರೆ, ಒಂದೊಂದು ಚೆಕ್‌ಪೋಸ್ಟ್‌ಗಳಲ್ಲಿ ಸೀನಿಯರ್ ಮೋಟಾರ್ ವೆಹಿಕಲ್ ನಿರೀಕ್ಷಕರು ಒಬ್ಬರು ಇದ್ದರೆ, ಇಬ್ಬರು ಮೋಟಾರ್ ವೆಹಿಕಲ್ ನಿರೀಕ್ಷಕರು ಇರಬೇಕೆಂದು ಸರ್ಕಾರ ಆಜ್ಞೆ ಮಾಡಿದೆ, ಅದರ ಪ್ರಕಾರ ಚೆಕ್‌ಪೋಸ್ಟ್‌ಗಳಲ್ಲಿ ನೇಮಕವಾಗುತ್ತಿಲ್ಲವಲ್ಲವೆಂದು ನಾನು ಕೇಳಿದ ಪ್ರಶ್ನೆಯಾಗಿದೆ. ಸರ್ಕಾರ ನಿಗದಿ ಮಾಡಿದ ರಾಜಸ್ವವನ್ನು ವಸೂಲು ಮಾಡುವುದಕ್ಕೆ ಮೂರು ವರ್ಷಗಳಿಂದ ಸಾಧ್ಯವಾಗಿಲ್ಲ. ನಮಗೆ 12 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಇದಕ್ಕೆ ಕಾರಣವೇನು ಎಂದು ಕೇಳುತ್ತಿದ್ದೇನೆ. ಅಧಿಕಾರಿಗಳು ನಮಗೆ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಸದನಕ್ಕೆ ಕಳೆದ ಸಲ ಕೊಟ್ಟಂಥ ಮಾಹಿತಿಯಲ್ಲಿ ಒಂದೇ ಹಾಳೆಯಲ್ಲಿ ಎರಡು ಕಡೆ ಮಿಸ್ಟೇಕ್ ಮಾಡಿದ್ದಾರೆ. ಅತ್ತಿಬೆಲೆ ಚೆಕ್‌ಪೋಸ್ಟ್‌ನಲ್ಲಿ ರಾಜಸ್ವ ಗುರಿ ಎಷ್ಟು ಎಂದು ಕೇಳಿದಾಗ 480 ಲಕ್ಷ ರೂಪಾಯಿಗಳು ಎಂದು ಕೊಟ್ಟಿದ್ದಾರೆ. 2001ರಲ್ಲಿ ನಿಗದಿಪಡಿಸಿದ ರಾಜಸ್ವ 460ರಲ್ಲಿ ವಸೂಲಾತಿ ಮಾಡಿರುವುದು 345, ಅಂದರೆ ಮೇಲೆ ತೋರಿಸಿರುವುದು 480, ಅದೇ ಹಾಳೆಯಲ್ಲಿ ಕೆಳಗಡೆ 460, ಅಂದರೆ 20 ಕೋಟಿ ರೂಪಾಯಿಗಳು ಎಲ್ಲಿ ಹೊಯಿತು ? ನಂಗ್ಲಿಯಲ್ಲಿ 210 ಲಕ್ಷ ರೂಪಾಯಿಗಳು ಸರ್ಕಾರ ರಾಜಸ್ವವನ್ನು ನಿಗದಿ ಮಾಡಿದೆ,

ಅದೇ ಹಾಳೆಯಲ್ಲಿ ಕೆಳಗಡೆ 200 ಎಂದು ಹೇಳಿದ್ದಾರೆ. ಅಂದರೆ 10 ಲಕ್ಷ ರೂಪಾಯಿಗಳು ಎಲ್ಲಿ ಹೊಯಿತು ? ತಪ್ಪು ಮಾಹಿತಿಯನ್ನು ಅಧಿಕಾರಿಗಳು ಕೊಟ್ಟು 2925 ಲಕ್ಷ ರೂಪಾಯಿಗಳು ರಾಜಸ್ವ ಎಂದು ಹೇಳಿದ್ದಾರೆ. ಇಲ್ಲಿ ಕರೆಕ್ಟಾಗಿ ಇದೆ, ಆದರೆ ಮಧ್ಯೆದಲ್ಲಿ ಹೆಚ್ಚು ಕಡಿಮೆಯಾಗುವುದಕ್ಕೆ ಕಾರಣವೇನು ? ತಮಗೆ ಮಾಹಿತಿಯನ್ನು ಬೇಕಾದರೆ ಕಳುಹಿಸಿಕೊಡುತ್ತೇನೆ. ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಡುವುದರಿಂದ ತಮಗೆ ಆರ್ಥಿಕವಾಗಿ ಹಾಗೂ ರಾಜಸ್ವದಲ್ಲಿ ಏರುಪೇರುಗಳಾಗುತ್ತಿದೆ. ದಯವಿಟ್ಟು ಅದರ ಬಗ್ಗೆ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಮಾನಾಥ ರೈ :- ಮಾನ್ಯ ಅಧ್ಯಕ್ಷರೆ, ಹಿರಿಯ ನಿರೀಕ್ಷಕರಿಗೆ ಇಬ್ಬರು ಕಿರಿಯ ನಿರೀಕ್ಷಕರು ಬೇಕು ಎಂದು ಹೇಳುತ್ತಿದ್ದಾರೆ. ಕಳೆದ ಕೆಲವಾರು ವರ್ಷಗಳಿಂದ ಈ ಚೆಕ್‌ಪೋಸ್ಟ್‌ಗಳಲ್ಲಿ ಇಬ್ಬರು ಹಿರಿಯ ನಿರೀಕ್ಷಕರಿಗೆ ಒಬ್ಬರು ಕಿರಿಯ ನಿರೀಕ್ಷಕರು ಎಂದು ಹಾಕಿಕೊಂಡು ಬಂದಿದ್ದೇವೆ. ಚೆಕ್‌ಪೋಸ್ಟ್‌ಗಳ ಸುಧಾರಣೆ ಸಂದರ್ಭದಲ್ಲಿ ಕಾಮನ್ ಚೆಕ್‌ಪೋಸ್ಟ್‌ಗಳಲ್ಲಿ ಅಬಕಾರಿ, ಸಾರಿಗೆ, ಎಕ್ಸೈಸ್ ಮತ್ತು ಕಮರ್ಷಿಯಲ್ ಟ್ಯಾಕ್ಸ್ ಇವುಗಳೆಲ್ಲವನ್ನೂ ಸೇರಿಸಿ ಒಂದು ಕಾಂಪೋಸಿಟ್ ಚೆಕ್‌ಪೋಸ್ಟ್‌ಗಳನ್ನು ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಒಂದೇ ರೀತಿ ಚೆಕ್‌ಪೋಸ್ಟ್‌ಗಳನ್ನು ಮಾಡುವುದಕ್ಕೆ ಸರ್ಕಾರ ಗಮನವನ್ನು ಹರಿಸುತ್ತದೆ. ಏನಾದರೂ ಬದಲಾವಣೆ ಮಾಡಬೇಕು ಎನ್ನುವ ಸಂದರ್ಭ ಬಂದಾಗ ಅದನ್ನು ನಾವು ಮಾಡುತ್ತೇವೆ. 1999-2000ನೇ ಇಸ್ವಿಗೆ 251 ಲಕ್ಷ ರೂಪಾಯಿಗಳು 2001-02, 245 ಲಕ್ಷ ರೂಪಾಯಿಗಳು 2001-02ಕ್ಕೆ 2386 ಲಕ್ಷ ರೂಪಾಯಿಗಳು ರಾಜಸ್ವ ಸಂಗ್ರಹವಾಗಿದೆ.

ಶ್ರೀ ಎನ್. ಸಂಪಂಗಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಸಚಿವರು ಹೇಳಿದ ರೀತಿಯಲ್ಲಿ ಚೆಕ್‌ಪೋಸ್ಟ್‌ಗಳಲ್ಲಿ ಇನ್ಸ್‌ಪೆಕ್ಟರ್‌ಗಳನ್ನು ನೇಮಕ ಮಾಡುವ ವಿಚಾರದಲ್ಲಿ 1991ರಲ್ಲಿ ಒಂದು ಆದೇಶ ಬಂದಿದೆ. ಸಂಖ್ಯೆ : ಎಫ್‌ಟಿಡಿ, ಜಿಎ : ಟಿಎಂಐ : 91, ದಿನಾಂಕ 21-12-1991ರ ಆದೇಶದ ಪ್ರಕಾರವಾಗಿ ಚೆಕ್‌ಪೋಸ್ಟ್‌ಗಳಲ್ಲಿರುವ ಇಬ್ಬರು ಹಿರಿಯ ಮೋಟಾರು ನಿರೀಕ್ಷಕರಿಗೆ ಒಬ್ಬರು ಮೋಟಾರು ಪರೀಕ್ಷಕರನ್ನು ನೇಮಿಸಬೇಕೆಂದು ಆಗಿದೆ. ಅದನ್ನು ಏಕೆ ಪಾಲಿಸಲಿಲ್ಲವೆಂದು ನಾನು ಕೇಳುತ್ತಿದ್ದೇನೆ. ಇದು ಸರ್ಕಾರದ ಆದೇಶ.

ಶ್ರೀ ಬಿ. ರಮಾನಾಥ ರೈ :- ಮಾನ್ಯ ಅಧ್ಯಕ್ಷರೆ, ಇದು ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ, ನಾವು ಇದನ್ನು ಗಣಕೀಕರಣ ಮಾಡುವ ಸಂದರ್ಭದಲ್ಲಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಎನ್. ಸಂಪಂಗಿ :- ಚೆಕ್‌ಪೋಸ್ಟ್‌ಗಳಲ್ಲಿ ಮಾತ್ರ ಈ ರೀತಿಯಾಗಿದೆ, ಆದರೆ ಕಛೇರಿಗಳಲ್ಲಿ ಒಂದು ಸೀನಿಯರ್ ಮೋಟಾರು ವೆಹಿಕಲ್ ಇನ್ಸ್‌ಪೆಕ್ಟರ್ ಮತ್ತು 4 ಜನ ಬೇರೆ ಕಡೆ ಇದೆ, ಚೆಕ್‌ಪೋಸ್ಟ್‌ಗಳಲ್ಲಿ ಈ ತಾರತಮ್ಯವೇಕೆ ? ಇದನ್ನು ನಾನು ಅವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಬಿ. ರಮಾನಾಥ ರೈ :- ನಾನು ಈಗಾಗಲೇ ಹೇಳಿದಂತೆ ಇದು ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ, ಕಾಮನ್ ಚೆಕ್‌ಪೋಸ್ಟ್ ಮಾಡುವ ಸಂದರ್ಭದಲ್ಲಿ ಅವರ ಸಲಹೆಯನ್ನು ಗಮನಿಸುತ್ತೇವೆ.

ಅಧ್ಯಕ್ಷರು :- ಮಾನ್ಯ ಚೆನ್ನಿಗಪ್ಪನವರೆ, ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ :- ಮಾನ್ಯ ಅಧ್ಯಕ್ಷರೆ, ಇಲ್ಲಿ ನನ್ನ ಪ್ರಶ್ನೆ ಇದೆ.

ಅಧ್ಯಕ್ಷರು :- ತಮ್ಮ ಪ್ರಶ್ನೆ ಸಂಖ್ಯೆ : 89 : 642ನ್ನು ಎನರ್ಜಿ ಇಲಾಖೆಗೆ ವರ್ಗಾಯಿಸಲಾಗಿದೆ. ಉತ್ತರ ಬರುತ್ತದೆ. ಇನ್ನೂ ನಾವು ಮೂರು ವಾರಗಳ ಕಾಲ ಅಧಿವೇಶನವನ್ನು ನಡೆಸುತ್ತೇವೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ :- ಮಾನ್ಯ ಮಂತ್ರಿಗಳಿಂದ ಎರಡು ಪತ್ರಗಳು ಬಂದಿದ್ದರೂ ಕೂಡ ಆ ಅಧಿಕಾರಿಗಳು ಉಲ್ಲಂಘನೆಯನ್ನು ಮಾಡುತ್ತಿದ್ದಾರೆ. ಅದಕ್ಕೋಸ್ಕರವಾಗಿ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ, ಅವರೇ ಸ್ವತಃ ಇಂಧನ ಖಾತೆಯನ್ನು ಹೊಂದಿರುವುದರಿಂದ ಅನುಕೂಲವಾಗುತ್ತದೆ.

ಅಧ್ಯಕ್ಷರು :- ತುರ್ತಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಮುಂದಿನ ವಾರ ಅಥವಾ ಮರು ವಾರದಲ್ಲಿ ನಿಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇನೆ.

ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಂಡಿರುವ ಸಣ್ಣ ನೀರಾವರಿ ಯೋಜನೆಗಳು

90 (620) ಶ್ರೀ ಚೆನ್ನಿಗಪ್ಪ ಸಿ. (ಕೊರಟಗೆರೆ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 3 ವರ್ಷಗಳಿಂದ ವಿವಿಧ ಸಣ್ಣ ನೀರಾವರಿ ಯೋಜನೆಗಳಡಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಎಷ್ಟು ಹಣ ಮಂಜೂರಾಗಿದೆ ; ಎಷ್ಟು ಹಣ ಖರ್ಚು ಮಾಡಲಾಗಿದೆ ;

ಆ) ಪೂರ್ಣಗೊಂಡಿರುವ ಹಾಗೂ ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು ; ಪ್ರತಿ ಕಾಮಗಾರಿಯ ಹೆಸರು ಅಂದಾಜು ಮೊತ್ತ, ಖರ್ಚಾದ ಹಣ ಮುಂತಾದ ಸಂಪೂರ್ಣ ಮಾಹಿತಿಯನ್ನು ನೀಡುವುದು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) 1999-2000 ರಿಂದ 2001-02ರ ವರೆಗೆ ಮಾಗಡಿ ವಿಧಾನ ಸಭಾ ಕ್ಷೇತ್ರಕ್ಕೆ ವಿವಿಧ ಯೋಜನೆಗಳಡಿಯಲ್ಲಿ ಒಟ್ಟು 17 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಸದರಿ ಕಾಮಗಾರಿಗಳಿಗೆ ರೂ. 360.21 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಮಾರ್ಚ್ 2002ರ ಅಂತ್ಯಕ್ಕೆ ರೂ. 352.86 ಲಕ್ಷಗಳು ವೆಚ್ಚವಾಗಿರುತ್ತದೆ.

ಆ) 1999-2000 ರಿಂದ 2001-02ನೇ ಸಾಲಿನವರೆಗೆ ತೆಗೆದುಕೊಂಡ ಒಟ್ಟು 17 ಕಾಮಗಾರಿಗಳಲ್ಲಿ 6 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಉಳಿದ 11 ಕಾಮಗಾರಿಗಳನ್ನು ಪೂರ್ಣಗೊಳಿಸಲು ಸುಮಾರು ರೂ. 393.62 ಲಕ್ಷ ಅನುದಾನ ಬೇಕಾಗಿರುತ್ತದೆ. ಕಾಮಗಾರಿಯ ಹೆಸರು ಹಾಗೂ ವಿವಿಧ ಹಂತದ ಹಾಗೂ ಬೇಕಾಗಿರುವ ಅನುದಾನದ ವಿವರಗಳನ್ನು ಪ್ರತ್ಯೇಕ ಅನುಬಂಧದಲ್ಲಿ ನೀಡಲಾಗಿದೆ.